# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿ ಹಾಗೂ ಶಿರಗುಪ್ಪ ತಾಲ್ಲೂಕಿನಲ್ಲಿ 2001-02ನೇ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿ ಹಣ ದುರುಪಯೋಗಪಡಿಸಿಕೊಂಡಿರುವ ಕುರಿತು ಶಿಸ್ತು ಕ್ರಮ

*****

**ಓದಲಾಗಿದೆ:-**

(1) ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 74 ಕೃಪವಿ 2006 ದಿನಾಂಕ: 15-12-2006.

(2) ದಿವಂಗತ ಜಯಪ್ರಕಾಶ, ಕೃಷಿ ಅಧಿಕಾರಿ ಇವರ ಲಿಖಿತ ಹೇಳಿಕೆ ದಿನಾಂಕ: 12-01-2007.

(3) ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಕೃಷಿ ಸಹಾಯಕ(ನಿವೃತ್ತ) ಇವರ ಲಿಖಿತ ಹೇಳಿಕೆ ದಿನಾಂಕ: 03-03-2007.

(4) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 74 ಕೃಪವಿ 2006, ದಿನಾಂಕ: 22-08-2007.

(5) ಸರ್ಕಾರದ ಆದೇಶ ಸಂ. ಕೃತೋಇ 74 ಕೃಪವಿ 2006, ದಿನಾಂಕ: 19-11-2008.

(6) ಶ್ರೀ ಜಿ. ನಂದಕುಮಾರ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರು, ಹಾಗೂ ವಿಚಾರಣಾಧಿಕಾರಿಗಳು, ಇವರ ವಿಚಾರಣಾ ವರದಿ ದಿನಾಂಕ: 06-06-2011

(7) ಸಂ. ಕೃತೋಇ 74 ಕೃಪವಿ 2006, ದಿನಾಂಕ: 07-09-2011 ಎರಡನೇ ಕಾರಣ ಕೇಳುವ ಸೂಚನಾ ಪತ್ರ.

(8) ಶ್ರೀ ಕೆ. ಮೊಹಿದ್ದಿನ ಸಾಹೇಬ್, ಕೃಷಿ ಸಹಾಯಕ (ನಿವೃತ್ತ) ಇವರ ಲಿಖಿತ ಹೇಳಿಕೆ ದಿನಾಂಕ: 03-10-2011.

(9) ದಿವಂಗತ ಜಯಪ್ರಕಾಶ, ಕೃಷಿ ಅಧಿಕಾರಿ, ಇವರ ಪತ್ನಿಯಾದ ಶ್ರೀಮತಿ ಪಿ. ಪದ್ಮಾವತಿ (ಮೊದಲನೆ ಪತ್ನಿ) ಹಾಗೂ ಇಬ್ಬರು ಮಕ್ಕಳ ಹೇಳಿಕೆ ದಿನಾಂಕ: 21-11-2011.

(10) ದಿವಂಗತ ಜಯಪ್ರಕಾಶ, ಕೃಷಿ ಅಧಿಕಾರಿ, ಇವರ ಪತ್ನಿ ಶ್ರೀಮತಿ ಶಿವಕುಮಾರಿ (2ನೇ ಪತ್ನಿ) ಹಾಗೂ ಇಬ್ಬರು ಮಕ್ಕಳು ಇವರ ಲಿಖಿತ ಹೇಳಿಕೆ ದಿನಾಂಕ: 21-11-2011.

*****

**ಪ್ರಸ್ತಾವನೆ:-**

ಮೇಲೆ ಕ್ರ.ಸಂ.(1)ರ ದಿನಾಂಕ: 15-12-2006ರ ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರದಲ್ಲಿ, ಬಳ್ಳಾರಿ ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆ, ಹಗರಿ ಬೊಮ್ಮನಹಳ್ಳಿ, ತಾಲ್ಲೂಕಿನಲ್ಲಿ 2001-02ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವ ಕುರಿತು,

ಶ್ರೀ ಸಿ. ಜಯಪ್ರಕಾಶ್, ಅಂದಿನ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಜಲಾನಯನ ಅಭಿವೃದ್ಧಿ ಇಲಾಖೆ ಹಗರಿ ಬೊಮ್ಮನಹಳ್ಳಿ, ಹಾಗೂ (2) ಶ್ರೀ.ಕೆ. ಮೊಹಿದ್ದಿನ್ ಸಾಹೇಬ್, ಕೃಷಿ ಅಧಿಕಾರಿ, ಇವರುಗಳಿಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಿ ಸದರಿಯವರ ಮೇಲಿರುವ ಆರೋಪಗಳಿಗೆ ಉಚಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (2) ಹಾಗೂ (3)ರಲ್ಲಿ, ಸದರಿ ಅಧಿಕಾರಿಯವರು ತಮ್ಮ ಮೇಲಿನ ಆರೋಪಗಳ ಬಗ್ಗೆ ಉಚಿತ ಹೇಳಿಕೆ ಸಲ್ಲಿಸಿರುತ್ತಾರೆ. ಶ್ರೀ ಮೊಹಿದ್ದಿನ್ ಸಾಹೇಬ್ , ಕೃಷಿ ಸಹಾಯಕ ಇವರು ತಮ್ಮ ಹೇಳಿಕೆಯನ್ನು ತಡವಾಗಿ ಸಲ್ಲಿಸಿದ್ದು, ತಮ್ಮ ಮೇಲಿರುವ ಆರೋಪಗಳನ್ನು ಅಲ್ಲಗೆಳೆದರು. ಆದರೆ ಸದರಿ ಆರೋಪಗಳನ್ನು ತಾವು ಎಸಗಿರುವುದಿಲ್ಲವೆಂಬುದಕ್ಕೆ ಯಾವುದೇ ಒಪ್ಪಬಹುದಾದಂತಹ ದಾಖಲೆಗಳನ್ನು ನೀಡಿರುವುದಿಲ್ಲ. ಆದ್ದರಿಂದ, ಮೇಲೆ ಓದಲಾದ ಕ್ರ.ಸಂ. (4)ರಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಜೊತೆಗೆ 13ನ್ನು ಓದುವುದರೊಂದಿಗೆ ಸದರಿ ಪ್ರಕರಣದಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು, ಶ್ರೀ ವೈ.ಆರ್. ಸಾಹುಕಾರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಆಡಳಿತಾಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ ಬಳ್ಳಾರಿ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಯಿತು.

ಮೇಲೆ ಕ್ರಮ ಸಂಖ್ಯೆ:(5)ರಲ್ಲಿ ಓದಲಾದ ಆದೇಶದಲ್ಲಿ ವಿಚಾರಣಾಧಿಕಾರಿಗಳಾದ ಶ್ರೀ ವೈ.ಆರ್. ಸಾಹುಕಾರ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರು, ಇವರಿಗೆ ಸದರಿ ಪ್ರಕರಣವನ್ನು ವಿಚಾರಣೆಗೆ ವಹಿಸಿ ಸುಮಾರು ಒಂದು ವರ್ಷವಾದರೂ, ಪ್ರಕರಣದ ವಿಚಾರಣೆ ಪ್ರಾರಂಬ ಮಾಡದೇ ಇರುವುದರಿಂದ, ಇವರಿಗೆ ವಿಚಾರಣಾಧಿಕಾರಿಯಾಗಿ ನೇಮಿಸಿದ್ದನ್ನು ಬದಲಾಯಿಸಿ, ಶ್ರೀ ಜಿ.ನಂದಕುಮಾರ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಯಿತು. ಇವರು ಸದರಿ ಪ್ರಕರಣದಲ್ಲಿ ಕೂಲಂಕಷವಾಗಿ ವಿಚಾರಣೆ ನಡೆಸಿ, ಆರೋಪಿತ ಅಧಿಕಾರಿಯವರ ಮೇಲಿನ ಆರೋಪ ಸಾಬಿತಾಗಿದೆಯೆಂದು ಮೇಲೆ ಓದಲಾದ ಕ್ರ.ಸಂ. (6)ರಲ್ಲಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

--3--

ಮೇಲೆ ಓದಲಾದ ಕ್ರ.ಸಂ. 7ರಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿ, ದಿವಂಗತ ಜಯಪ್ರಕಾಶರವರ ಪತ್ನಿ ಹಾಗೂ ನಿವೃತ್ತ ನೌಕರರಾದ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಕೃಷಿ ಸಹಾಯಕ ಇವರಿಗೆ 2ನೇ ಕಾರಣ ಕೇಳುವ ಪತ್ರ ಜಾರಿ ಮಾಡಿ ವಿಚಾರಣೆಯ ವರದಿಯ ಬಗ್ಗೆ ತಮ್ಮ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಯಿತು.

ಮೇಲೆ ಓದಲಾದ ಕ್ರ.ಸಂ. (8) ರಲ್ಲಿ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ನಿವೃತ್ತ ಕೃಷಿ ಸಹಾಯಕ, ಇವರು ತಮ್ಮ ಮೇಲಿರುವ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ನೀಡಿ, ತಾವು ವಿಚಾರಣಾಧಿಕಾರಿಯವರ ಮುಂದೆ ವಿಚಾರಣೆಗೆ ಹಾಜರಾಗಿದ್ದಾಗ, ಪ್ರಾಥಮಿಕವಾಗಿ ಸದರಿ ಕಾಮಗಾರಿಗಳನ್ನು ಪರಿಶೀಲನೆ ಮಾಡಿದ ಕೃಷಿ ನಿರ್ದೇಶಕರು, ಕಾಮಗಾರಿಗೆ ಆಯ್ಕೆ ಮಾಡಿದ ಸ್ಥಳದಲ್ಲಿ ಸ್ಪುಟವಾದ ದಂಡಗಳು ಇರುವುದಿಲ್ಲವೆಂದು ವಿಚಾರಣೆಯಲ್ಲಿ ಹೇಳಿರುತ್ತಾರೆ. ಆದರೆ ಇದಕ್ಕೆ ಉತ್ತರವಾಗಿ ಶ್ರೀ ಮೊಹಿದ್ದಿನ್, ಕೃಷಿ ಸಹಾಯಕರು, ಹೇಳಿಕೆ ನೀಡಿ, "ಸ್ಥಳ ಆಯ್ಕೆ ಮಾಡುವುದು ಸಹಾಯಕ ಕೃಷಿ ಅಧಿಕಾರಿಯಾಗಿದ್ದು, ತಾವು ಕೃಷಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಮ್ಮ ಮೇಲಾಧಿಕಾರಿಗಳ ಆದೇಶದಂತೆ ತಾವು ಕರ್ತವ್ಯ ನಿರ್ವಹಿಸಿದ್ದೇನೆಂದು,, ಹೇಳಿರುತ್ತಾರೆ. ಆದರೆ ಈ ಹೇಳಿಕೆಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ಅದಲ್ಲದೆ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿಚಾರಣಾಧಿಕಾರಿಗಳು ವಿಚಾರಣೆಯ ಸಮಯದಲ್ಲಿ ಎಲ್ಲಾ ವಿಷಯವನ್ನು ಪರಿಶೀಲಿಸಿಯೇ ಆರೋಪಿತರ ತಪ್ಪಿತಸ್ಥರೆಂದು ವಿಚಾರಣಾ ವರದಿ ನೀಡಿರುವುದು, ಕಂಡು ಬರುತ್ತದೆ.

ಈ ಪ್ರಕರಣದಲ್ಲಿ ಇನ್ನೊಬ್ಬ ಆರೋಪಿತ ಅಧಿಕಾರಿವರಾದ ದಿವಂಗತ ಜಯಪ್ರಕಾಶ, ಇವರಿಗೆ ಇಬ್ಬರು ಪತ್ನಿಯರಿದ್ದು, ಇಬ್ಬರು ಪತ್ನಿಯವರಿಗೆ ಎರಡೆರಡು ಮಕ್ಕಳಿರುತ್ತಾರೆ. ದಿವಂಗತ ಆರೋಪಿತ ಅಧಿಕಾರಿಯವರ ವಾರಸುದಾರರಾದ ಇಬ್ಬರು ಪತ್ನಿಯರಿಗೆ ವಿಚಾರಣಾ ವರದಿಯನ್ನು ಲಗತ್ತಿಸಿ, 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಗಿದ್ದು, ಅದಕ್ಕುತ್ತರವಾಗಿ, ಅವರು ತಮ್ಮ ಗಂಡನಿಂದ ಸರ್ಕಾರಕ್ಕಾಗಿರುವ

ನಷ್ಟವನ್ನು ತಮಗೆ ಪಾವತಿಸಬೇಕಾದ ಉಪದಾನದಲ್ಲಿ ಕಡಿತ ಮಾಡಿಕೊಂಡು ಉಳಿದ ಹಣವನ್ನು ಮೊದಲನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹಾಗೂ ಪ್ರ. ನ್ಯಾ.ದಂ.ನ್ಯಾಯಾಲಯ ಬಳ್ಳಾರಿ ಹಾಗೂ ಲೋಕ ಅದಾಲತ್ ಬಳ್ಳಾರಿಯ ಪ್ರಕರಣದ ಸಂ. ಪಿ & ಎಸ್ 7/2010ರಲ್ಲಿ ದಿನಾಂಕ: 20-08-2011ರಂದು ನೀಡಿದ ಸಕ್ಸಷನ್ ಸರ್ಟಿಫಿಕೇಟು ಆಧಾರದ ಮೇಲೆ ತಮ್ಮ ಕುಟುಂಬಕ್ಕೆ ಪಾವತಿಸುವಂತೆ ಆರೋಪಿತರ ಅಧಿಕಾರಿಯವರ ಇಬ್ಬರೂ ಪತ್ನಿಯವರು ಕ್ರ.ಸಂ (9) ಹಾಗೂ (10)ರಲ್ಲಿ ಓದಲಾದ ಪತ್ರಗಳಲ್ಲಿ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಆರೋಪಿ ಅಧಿಕಾರಿ/ನೌಕರರ ಮೇಲಿನ ಆರೋಪ ಸಾಬಿತಾಗಿದೆಯೆಂದು ವಿಚಾರಣಾಧಿಕಾರಿಯವರು, ನೀಡಿದ ವಿಚಾರಣಾ ವರದಿಯನ್ನು ಒಪ್ಪಿ, ದಿವಂಗತ ಜಯಪ್ರಕಾಶ, ಅಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಹಗರಿಬೊಮ್ಮನಹಳ್ಳಿ, ಹಾಗೂ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಕೃಷಿ ಸಹಾಯಕ (ನಿವೃತ್ತ) ಇವರು ದುರುಪಯೋಗಪಡಿಸಿಕೊಂಡಿರುವ ಒಟ್ಟು ಹಣ ರೂ. 49,623/-ನ್ನು ಇಬ್ಬರಿಂದಲೂ ಸಮ ಸಮವಾಗಿ, ಅಂದರೆ, ಪ್ರತಿಯೊಬ್ಬರಿಗೆ ರೂ. 24,807 ರಂತೆ ಅವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ..

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 74 ಕೃಪವಿ 2006,**

**ಬೆಂಗಳೂರು, ದಿನಾಂಕ: 30-04-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ದಿವಂಗತ ಸಿ. ಜಯಪ್ರಕಾಶ, ಅಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಹಗರಿಬೊಮ್ಮನಹಳ್ಳಿ, ಹಾಗೂ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಅಂದಿನ ಕೃಷಿ ಸಹಾಯಕ ಹಾಲಿ ನಿವೃತ್ತ, ಜಲಾನಯನ ಅಭಿವೃದ್ಧಿ ಇಲಾಖೆ, ಹಗರಿ ಬೊಮ್ಮನಹಳ್ಳಿ, ಇವರು ಕಾಮಗಾರಿ ನಿರ್ವಹಿಸುವಲ್ಲಿ

ನಷ್ಟವನ್ನು ತಮಗೆ ಪಾವತಿಸಬೇಕಾದ ಉಪದಾನದಲ್ಲಿ ಕಡಿತ ಮಾಡಿಕೊಂಡು ಉಳಿದ ಹಣವನ್ನು ಮೊದಲನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹಾಗೂ ಪ್ರ. ನ್ಯಾ.ದಂ.ನ್ಯಾಯಾಲಯ ಬಳ್ಳಾರಿ ಹಾಗೂ ಲೋಕ ಅದಾಲತ್ ಬಳ್ಳಾರಿಯ ಪ್ರಕರಣದ ಸಂ. ಪಿ & ಎಸ್ 7/2010ರಲ್ಲಿ ದಿನಾಂಕ: 20-08-2011ರಂದು ನೀಡಿದ ಸಕ್ಸಷನ್ ಸರ್ಟಿಫಿಕೇಟು ಆಧಾರದ ಮೇಲೆ ತಮ್ಮ ಕುಟುಂಬಕ್ಕೆ ಪಾವತಿಸುವಂತೆ ಆರೋಪಿತರ ಅಧಿಕಾರಿಯವರ ಇಬ್ಬರೂ ಪತ್ನಿಯವರು ಕ್ರ.ಸಂ (9) ಹಾಗೂ (10)ರಲ್ಲಿ ಓದಲಾದ ಪತ್ರಗಳಲ್ಲಿ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಆರೋಪಿ ಅಧಿಕಾರಿ/ನೌಕರರ ಮೇಲಿನ ಆರೋಪ ಸಾಬಿತಾಗಿದೆಯೆಂದು ವಿಚಾರಣಾಧಿಕಾರಿಯವರು, ನೀಡಿದ ವಿಚಾರಣಾ ವರದಿಯನ್ನು ಒಪ್ಪಿ, ದಿವಂಗತ ಜಯಪ್ರಕಾಶ, ಅಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಹಗರಿಬೊಮ್ಮನಹಳ್ಳಿ, ಹಾಗೂ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಕೃಷಿ ಸಹಾಯಕ (ನಿವೃತ್ತ) ಇವರು ದುರುಪಯೋಗಪಡಿಸಿಕೊಂಡಿರುವ ಒಟ್ಟು ಹಣ ರೂ. 49,623/-ನ್ನು ಇಬ್ಬರಿಂದಲೂ ಸಮ ಸಮವಾಗಿ, ಅಂದರೆ, ಪ್ರತಿಯೊಬ್ಬರಿಗೆ ರೂ. 24,807 ರಂತೆ ಅವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ..

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 74 ಕೃಪವಿ 2006,**

**ಬೆಂಗಳೂರು, ದಿನಾಂಕ: 30-04-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ದಿವಂಗತ ಸಿ. ಜಯಪ್ರಕಾಶ, ಅಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಹಗರಿಬೊಮ್ಮನಹಳ್ಳಿ, ಹಾಗೂ ಶ್ರೀ ಕೆ. ಮೊಹಿದ್ದಿನ್ ಸಾಹೇಬ್, ಅಂದಿನ ಕೃಷಿ ಸಹಾಯಕ ಹಾಲಿ ನಿವೃತ್ತ, ಜಲಾನಯನ ಅಭಿವೃದ್ಧಿ ಇಲಾಖೆ, ಹಗರಿ ಬೊಮ್ಮನಹಳ್ಳಿ, ಇವರು ಕಾಮಗಾರಿ ನಿರ್ವಹಿಸುವಲ್ಲಿ

ದುರುಪಯೋಗಪಡಿಸಿಕೊಂಡಿರುವ ಒಟ್ಟು ಹಣ ರೂ. **49,613-00 (ಒಟ್ಟು ನಲವತ್ತೊಂಬತ್ತ ಸಾವಿರದಾ ಆರು ನೂರಾ ಹದಿಮೂರು ಮಾತ್ರ)**ರಲ್ಲಿ ಇಬ್ಬರಿಂದಲು ಸಮ ಸಮವಾಗಿ ಅಂದರೆ ಪ್ರತಿಯೊಬ್ಬರಿಂದ ರೂ. **24,807-00 (ಒಟ್ಟು ರೂಪಾಯಿ ಇಪ್ಪತ್ತನಾಲ್ಕು ಸಾವಿರದಾ ಎಂಟನೂರಾ ಏಳು ಮಾತ್ರ)** ರಂತೆ ಅವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Manjunath 30/4

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು,(ಲೆಕ್ಕಪತ್ರ ಮತ್ತು ಲೆಕ್ಕತಪಾಸಣೆ), ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
3) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬಳ್ಳಾರಿ.
5) ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬಳ್ಳಾರಿ.
6) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ,ವಿಕಾಸ ಸೌಧ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
8) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
9) ಸಂಬಂಧಪಟ್ಟ ಅಧಿಕಾರಿಯವರಿಗೆ (ಜಲಾನಯನ ಅಭಿವೃದ್ಧಿ ಆಯುಕ್ತರ ಮೂಲಕ)
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.